*ಕಾ. ಪ್ರಕಾಶ್, ಕನಕಪುರ*
*ಬೃಹತ್ ಭಾರತ ದೇಶವನ್ನು ಪ್ರತಿನಿಧಿಸುವ ಫುಟ್‌ಬಾಲ್ ಆಟಗಾರರು ನಮ್ಮಲ್ಲಿ ಇಲ್ಲವೇ?*



ಮಂತ್ರಿಯ ಚಿತ್ರವಿರುವ ಚೆಂಡನ್ನು ಕೊಡಿ; ಪ್ರತಿ ಶ್ರೀಸಾಮಾನ್ಯನೂ ಶ್ರೇಷ್ಠ ಫುಟ್ ಬಾಲ್ ಆಟಗಾರನಾದಾನು!

*ಸವಿರವಿ, ಬಾಳೆಹೊನ್ನೂರು*
*ಪುತ್ರಶೋಕ ನಿರಂತರ ಎನ್ನುತ್ತಾರೆ; ಪುತ್ರಿ ಶೋಕ ನಿರಂತರ ಎನ್ನುವುದಿಲ್ಲ, ಏಕೆ?*
'Mankind embraces women also' ಎಂದಿದೆ. ಪುತ್ರಿಶೋಕ eternalಲು!

*ಬಿ.ಎಂ. ಪರಶಿವಮೂರ್ತಿ, ಬೆಂಗಳೂರು*
*ಎರಡು ಗಡಿಯಾರಗಳು ಒಂದೇ ವೇಳೆಯನ್ನು ತೋರಿಸುವುದಿಲ್ಲವೇಕೆ?*
ಬೇರೆ ಬೇರೆ ಸಮಯಗಳಲ್ಲಿ ಹುಟ್ಟಿರುವುದರಿಂದ!

*ಹೆಚ್.ಆರ್. ಕಡಿವಾಲ, ಬದಾಮಿ*
*ಟಿವಿ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಸ್ತ್ರೀಯರೇ ನಿರೂಪಕರು ಇರುತ್ತಾರೆ, ಏಕೆ!*
ಕಾರ್ಯಕ್ರಮ ಚೆನ್ನಾಗಿಲ್ಲದಿದ್ದರೆ ಇವರನ್ನಾದರೂ ನೋಡುತ್ತಾ ಕೂಡಲೆಂದು!

*ಎನ್. ಅಶ್ವತ್ಥನಾರಾಯಣರಾವ್, ಬೆಂಗಳೂರು*
*ವೃದ್ಧಾಶ್ರಮಗಳು ವರವೋ, ಶಾಪವೋ?*



ನಡೆಸುವವರಿಗೆ ವರ, ಮಕ್ಕಳನ್ನು ಬಿಟ್ಟು ಅಲ್ಲಿರುವವರಿಗೆ ಶಾಪ.

*ನೆ.ಸು. ಆನಂದ, ಕತ್ತಿಗುಪ್ಪೆ*
*ಪಾದಯಾತ್ರೆಗೆ ಹೊರಟಿದ್ದೇವೆ, ತಾವೂ ಬರ್ತೀರಾ ಸಾರ್?*
ನನ್ನದು ಬೇರೆ ಪಕ್ಷ; ತಲೆ ಬೋಳಿಸಿಕೊಳ್ಳಲು ಹೋಗುತ್ತೇನೆ!

*ನಾರಾಯಣ, ಗುಗ್ಗರಹಟ್ಟಿ*
*ಗಂಡು ಕವಿಗಳು ಸಹ ಸೂರ್ಯನಂತೆ ಪ್ರಕಾಶಿಸುತ್ತಿರುವ ಗಂಡಿಗಿಂತ ಹೆಣ್ಣನ್ನು ಹೆಚ್ಚಾಗಿ ಹೊಗಳುತ್ತಾರಲ್ಲಾ...?*
ಏಕೆಂದರೆ ಹೆಣ್ಣಿನ ವರ್ಣನೆಯ ಪುಟಗಳನ್ನು ಆರಿಸಿಕೊಂಡು ಓದುತ್ತಾರೆ; ಗಂಡಿನ ವರ್ಣನೆಯ ಪುಟಗಳನ್ನು ಹಾರಿಸಿಕೊಂಡು ಓದುತ್ತಾರೆ!

*ಮ. ಶಿವಸ್ವಾಮಿ ಕರೋಹಟ್ಟಿಕರ್, ಬೆಂಗಳೂರು*
*ಇತ್ತೀಚಿನ ದಿನಗಳಲ್ಲಿ ಅನ್ಯಾಯ, ಅನೀತಿ, ಅಧರ್ಮ, ಅಶ್ಲೀಲ ಹೆಚ್ಚಾಗುತ್ತಿರಲು ಕಾರಣವೇನು?*
ಈ ಪ್ರಶ್ನೆಯನ್ನು ಮೊದಲ ಬಾರಿಗೆ ಧರ್ಮರಾಯನು ವಿದುರನನ್ನು ಕೇಳಿದನಂತೆ!

*ಮಲ್ಲಿಕಾರ್ಜುನ, ಗಿರಗಾಂವ*
*ಮಗುವನ್ನು ಮಲಗಿಸಲು ಲಾಲಿ ಹಾಡುವರು; ಗಂಡನನ್ನು ಮಲಗಿಸಲು ಏನು ಮಾಡಬೇಕು?*
ಮಗುವನ್ನು ಎಬ್ಬಿಸಿ, ಗಂಡ ತಾನಾಗಿಯೇ ಮಲಗುತ್ತಾನೆ.

*ಹರಳಹಳ್ಳಿ ಪುಟ್ಟರಾಜು, ಪಾಂಡವಪುರ*
*ಸೌಂದರ್ಯಕ್ಕಿಂತ ಆಕರ್ಷಣೆಯೇ ಹೆಚ್ಚು ಮನ ಸೆಳೆಯುವುದೇಕೆ?*
ಆಕರ್ಷಣೆಗೆ ಅಡ್ವರ್ಟೈಸ್‌ಮೆಂಟ್ ಹೆಚ್ಚಾಗಿರುವುದರಿಂದ!

*ಮೇಟಿ ಕೊಟ್ರಪ್ಪ, ಬಸರಕೋಡು*
*ಗೋಹತ್ಯಾ ನಿಷೇಧ ಕಾಯಿದೆ ಯಾರಿಗೆ ತಾನೆ ಫಾಯಿದೆ?*
ಗೋವಿಗೆ!

*ಪಿ.ಎಸ್. ಶ್ರೀವತ್ಸ, ಬೆಂಗಳೂರು*
*ನೀವು ಕೇಳಿದಿರಿ ವಿಭಾಗವನ್ನು ಎರಡು ಪುಟಕ್ಕೆ ಹೆಚ್ಚಿಸಿದ್ದೇ ಆದರೆ...?*
ಅಗಲ ಹೆಚ್ಚಿದರೆ ಆಳ ಕಡಿಮೆಯಾಗುವ ಭೀತಿ ಇರುತ್ತದೆ!

*ಎಂ.ಜಿ. ಶಿವರಾಂ, ಬೆಂಗಳೂರು*
*ಅಸೆಂಬ್ಲಿಯಲ್ಲಿ ಗೂಂಡಾಗಿರಿ; ಇದು ಎಂಥಾ ಪ್ರಜಾಪ್ರಭುತ್ವ?*
ಗುಂಡು, ತುಂಡು, ಗೂಂಡಾಗಳ ತುಂಡುಗಳಿಂದ ನಡೆಸಲ್ಪಡುವ ಮಜಾಪ್ರಭುತ್ವ!

*ಎಸ್.ಎಂ. ಪೈ, ಹೊನ್ನಾವರ*
*ಮಧ್ಯರಾತ್ರಿ ಮದ್ಯಾರಾಧನೆ ಎಷ್ಟು ಸರಿ...?*
ಮಧ್ಯಾಹ್ನವೇ ಸೂಕ್ತ ಎನ್ನುವಿರೇನು...?

*ಮಾಲತಿರಾಜು, ಬೆಂಗಳೂರು*
*ನೀವು ಕೇಳಿದಿರಿ ವಿಭಾಗದಲ್ಲಿ ಮಹಿಳಾ ಮೀಸಲಾತಿ ಇದೆಯೇ?*
ಆದ್ಯತೆ ಇದೆ; ಆದರೆ ಮಹಿಳೆಯರು ಇಲ್ಲಿಗಿಂತಲೂ ಪತಿಯರನ್ನೇ ಪ್ರಶ್ನಿಸುವುದರಲ್ಲಿ ನಿರತರಂತೆ!

## ಬಹುಮಾನಿತ ಪ್ರಶ್ನೆ

*ದೀಪಾ ವಿ. ಮಹಾಲೆ, ಹಳಿಯಾಳ*
*ಗಣೇಶ ಮೂಷಿಕವನ್ನು ತನ್ನ ವಾಹನವನ್ನಾಗಿ ಏಕೆ ಆಯ್ದುಕೊಂಡ?*
ಸಣ್ಣವರ ಮೇಲೆ ದೊಡ್ಡವರು ಸವಾರಿ ಮಾಡುವುದು ಜಗತ್ತಿನ ನಿಯಮವಾದ್ದರಿಂದ!

*ಸರ್ದಾರ್, ಎಂ. ಅರಸೀಕೆರೆ*
*ಯಾವುದಾದರೂ ವಿಶ್ವದಾಖಲೆ ಮಾಡಬಯಸಿದ್ದೇನೆ; ಸಲಹೆ ನೀಡಿ.*
ಹೆಂಡತಿಯಿಂದ ಅತಿ ದೀರ್ಘಕಾಲ ಬೈಸಿಕೊಂಡವನು ದಾಖಲೆಗೆ ಪ್ರಯತ್ನಿಸಿ!

*ಪಿ.ಜೆ. ರಾಘವೇಂದ್ರ, ಮೈಸೂರು*
*ವಿಧಾನಸಭೆ ಎಂದಾಕ್ಷಣ 'unlawful assembly' ನೆನಪಾಗುತ್ತಲ್ಲಾ...?*
ಸಂವಿಧಾನ 'someವಿಧಾನದಿಂದ 'sum ವಿಧಾನಕ್ಕೆ ತಿರುಗಿರುವಾಗ ನಿಮ್ಮ ಹೋಲಿಕೆ ಸರಿ.

*ವಿ. ಹಮೀದ್, ವಿಟ್ಲ*
*ವಕೀಲರು ಕಪ್ಪು ಬಟ್ಟೆಯನ್ನೇ ಧರಿಸುತ್ತಾರೇಕೆ?*
ಕುಯುಕ್ತಿ, ಕರಾಳತೆಗಳ



ಸಹವಾಸದಲ್ಲಿರುವವರಿಗೆ ಕಪ್ಪು ಬಣ್ಣವೇ ಮ್ಯಾಚಿಂಗ್ ಅಂತೆ!

*ವೆಂಕಟೇಶ್ ಜಿ.ಎಸ್, ಗೊಟ್ಟಿಗೆರೆ*
*ಯಡ್ಡಿಗೂ, ರೆಡ್ಡಿಗೂ ಇರುವ ಪ್ರಮುಖ ವ್ಯತ್ಯಾಸವೇನು?*
ಕಣ್ಣೀರಿನ ಸ್ಟಾಕ್!

*ಅರಕೆರೆ ಪಿ. ಸುರೇಶ್, ಭದ್ರಾವತಿ*
*ಪ್ರೇಮಿಗಳು ಚುಂಬಿಸುವಾಗ ಕಣ್ಣು ಮುಚ್ಚುವುದೇಕೆ?*
ಬಹಳ ಹತ್ತಿರದಿಂದ ಮುಖ ನೋಡಿದರೆ ಚುಂಬಿಸಲು ಮನಸ್ಸು ಬಾರದಂತೆ!

*ಬಾ.ರಂ. ಸುರೇಶ್, ಶಿವಮೊಗ್ಗ*
*ರಾಜಕಾರಣಿಗಳಿಗಿಂತಲೂ ಸುಖಪುರುಷರು ಯಾರಿದ್ದಾರೆ ಶಿವಾ?*
ಯಡ್ಡಿಯನ್ನು ಕೇಳಿ ನೋಡಿ. ಭೀಷ್ಮನ ಬಾಣದ ಮಂಚವೇ ಮೆತ್ತಗಿತ್ತು ಎನ್ನುತ್ತಾರವರು.

■ ರಾಮ್